# ಕರ್ನಾಟಕ ವಿಧಾನ ಪರಿಷತ್ತು
## ಗಮನ ಸೆಳೆಯುವ ಸೂಚನೆ ನಿಯಮ 330

**ಶ್ರೀ. ರವಿಕುಮಾರ ಎನ್, ಹಾಗೂ ಕೆ. ಎಸ್. ನವೀನ್ ಕರ್ನಾಟಕ ವಿಧಾನ ಪರಿಷತ್ತು ಸದಸ್ಯರು, ಕೇಳಿರುವ ರಾಜ್ಯದ ಹಲವಾರು ಸರಕಾರಿ ಆಸ್ಪತ್ರೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ಸಂಭವಿಸಿದ ನವಜಾತ ಶಿಶುಗಳ ಮತ್ತು ಬಾಣಂತಿಯರ ಸಾವಿನ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ: -**

ಕರ್ನಾಟಕ ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಸಂಭವಿಸಿದ ಬಾಣಂತಿಯರ ಸಾವಿನ ಮಾಹಿತಿಯು ಈ ಕೆಳಕಂಡಂತಿರುತ್ತದೆ.

- 1/12/2023 ರಿಂದ 30/11/2024 ರವರೆಗೆ ರಾಜ್ಯದಲ್ಲಿ ಒಟ್ಟು 516 ಗರ್ಭಿಣಿ ಮತ್ತು ಬಾಣಂತಿಯರು ಮರಣ ಹೊಂದಿರುತ್ತಾರೆ. ಕರ್ನಾಟಕ ರಾಜ್ಯವು ತಾಯಿ ಮರಣ ಪ್ರಮಾಣದಲ್ಲಿ ಭಾರತದ ಇತ್ತೀಚಿನ ವರದಿಯಂತೆ ಇತರೆ ರಾಜ್ಯಗಳಿಗೆ ಹೋಲಿಸಿದ್ದಲ್ಲಿ 8ನೇಯ ಸ್ಥಾನದಲ್ಲಿರುತ್ತದೆ.

**ತಾಯಿ ಮರಣಗಳಿಗೆ ಕಾರಣಗಳು ಈ ಕೆಳಕಂಡಂತಿರುತ್ತವೆ.**

1. Haemorrhage (ಪ್ರಸವ ಪೂರ್ವ, ಪ್ರಸವ & ಪ್ರಸವ ನಂತರ ಜನನಾಂಗದದಲ್ಲಿ ಅತೀವ್ರ ರಕ್ತ ಸ್ರಾವ).
2. ಪ್ರಸವ ಪೂರ್ವ, ಪ್ರಸವ & ಪ್ರಸವ ನಂತರ ಅಧಿಕ ರಕ್ತದೊತ್ತಡ/ಫಿಟ್ಸ್
3. ಗರ್ಭಾವಸ್ಥೆಯಲ್ಲಿ ಉಲ್ಬಣಗೊಳ್ಳುವ HIV, Hepatitis B, TB, Malaria, Dengue,ಮಾನಸಿಕ ಕಾಯಿಲೆ ಅಥವಾ ಮಧುಮೇಹ, ಹೃದಯ ಸಂಬಂಧಿತದಂತಹ ಮೊದಲೇ ಅಸ್ತಿತ್ವದಲ್ಲಿ ಖಾಯಿಲೆಗಳು
4. ಗರ್ಭಾವಸ್ಥೆಯಲ್ಲಿನ ರಕ್ತಹೀನತೆ.
5. ಕ್ಲಿಷ್ಟಕರ ಹೆರಿಗೆ (Prolonged & Obstructed labour)
6. ಗರ್ಭಪಾತ
7. ಹೆರಿಗೆಯಲ್ಲಿನ ಸೋಂಕುಗಳು.
8. ಇತರೆ ಕಾರಣಗಳಾದ Embolism, Renal disorder, liver disorder, ectopic pregnancy ಇತ್ಯಾದಿ.

**ಪ್ರಸ್ತುತ ತಾಯಿ ಮರಣ ಪ್ರಮಾಣವು 2018-20 ರ ಸಮೀಕ್ಷಾ ವರದಿಯಂತೆ 69 ಇದ್ದು, ಇನ್ನಷ್ಟು ಕಡಿಮೆಗೊಳಿಸಲು ಇಲಾಖೆಯು ಕ್ರಮ ಕೈಗೊಳ್ಳುತ್ತಿದೆ.**

ಗರ್ಭಿಣಿಯರ ಆರೋಗ್ಯ ತಪಾಸಣೆ ಮಾಡಿ ಸಂಪೂರ್ಣ ನಿಗಾವಹಿಸಿ ತಾಯಿ ಮತ್ತು ಮಕ್ಕಳ ಸಾವಿನ ಪ್ರಮಾಣವನ್ನು ತಗ್ಗಿಸುವ ನಿಟ್ಟಿನಲ್ಲಿ ಹಾಗೂ ತಾಯಿ ಮರಣವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ತಡೆಗಟ್ಟಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ರಕ್ತಹೀನತೆ ತಡೆಗಟ್ಟುವಿಕೆ:
  - ಕರ್ನಾಟಕ ರಾಜ್ಯದಲ್ಲಿ ಗರ್ಭಾವಸ್ಥೆಯಲ್ಲಿ ರಕ್ತ ಹೀನತೆಯನ್ನು ತಡೆಗಟ್ಟಲು iron sucrose ಚುಚ್ಚುಮದ್ದನ್ನು ತೀವ್ರತರ ರಕ್ತ ಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಬಾಣಂತಿಯರಿಗೆ ಅಲ್ಲದೆ ಮಾಧ್ಯಮಿಕ ಅಂದರೆ Hb % 10 ಗ್ರಾಂ ಗಿಂತ ಕೆಳಗಡೆ ಇರುವ ಎಲ್ಲಾ ಗರ್ಭಿಣಿ ಬಾಣಂತಿಯರಿಗೂ ನೀಡಲಾಗುತ್ತಿದೆ.
  - ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ದಿನಕ್ಕೆ 2 ಬಾರಿಯಂತೆ ಒಟ್ಟು 6 ತಿಂಗಳಿಗೆ 360 IFA ಮಾತ್ರೆಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ. ರಕ್ತದ ಹೀಮೋಗ್ಲೋಬಿನ್ ಹೆಚ್ಚಿಸಲು ಈ ಮಾತ್ರೆಗಳನ್ನು CHOs, ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಆಶಾಕಾರ್ಯಕರ್ತೆಯರು ಮತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ
  - ತೀವ್ರತರ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ಉಚಿತವಾಗಿ JSSK ಕಾರ್ಯಕ್ರಮದಡಿಯಲ್ಲಿ Blood Transfusion ವ್ಯವಸ್ಥೆ ಮಾಡಲಾಗಿದೆ.
- ಅಧಿಕ ರಕ್ತದ ಒತ್ತಡ ಮತ್ತು ಅಪೂರ್ಣ ಗರ್ಭಿಣಿ ಆರೈಕೆ – ಈ ಅಂಶವನ್ನು ಪ್ರತಿ ತಿಂಗಳು ನಡೆಸಲಾಗುವ PMSMA & e-PMSMA ಕಾರ್ಯಕ್ರಮಗಳಿಂದ ಸರಿಪಡಿಸಲಾಗುತ್ತಿದೆ.
- ಗರ್ಭಾವಸ್ಥೆಯ ಮೊದಲ ತ್ರೈಮಾಸಿಕದಲ್ಲಿ ನೋಂದಣಿಯು ಶೇಕಡ 100ರಷ್ಟು ಆಗಿರುವುದಿಲ್ಲ- ಇದನ್ನು ಸರಿಪಡಿಸಲು ಇಲಾಖೆಯ ಮುಂಚೂಣಿ ಕಾರ್ಯಕರ್ತೆಯರಾದ ಆಶಾ ಮತ್ತು ಕಿರಿಯ ಮಹಿಳಾ ಆರೋಗ್ಯ

ಸಹಾಯಕಿಯರವರಿಂದ ಮನೆ ಭೇಟಿಯನ್ನು ಉತ್ತೇಜಿಸಿ ಮೂತ್ರ ತಪಾಸಣೆಯನ್ನು ನೆರವೇರಿಸಿ ನೋಂದಾಯಿಸುವ ಕ್ರಮಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಗುತ್ತಿದೆ.

- ಅತೀವ ರಕ್ತ ಸ್ರಾವ ಮತ್ತು ಹೆರಿಗೆ ಸಮಯದ ಸೋಂಕು – ಈ ತೊಡಕನ್ನು ನಿವಾರಿಸಲು ವೈದ್ಯಾಧಿಕಾರಿಗಳು ಹಾಗೂ ಶುಶ್ರೂಷಕರಿಗೆ ಪುನರ್ ಮನನ ತರಬೇತಿ ನೀಡಲಾಗುತ್ತಿದೆ.
- ಕೆಳ ಹಂತದ ಆಸ್ಪತ್ರೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ 24x7 ಹೆರಿಗೆಗಾಗಿ ಕಾರ್ಯಗತಗೊಳಿಸಲಾಗುತ್ತಿದೆ
- ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು& ಸಿಬ್ಬಂದಿಗಳಿಗೆ ಕೌಶಲ್ಯ ಆಧಾರಿತ ದಕ್ಷತಾ ತರಬೇತಿಯನ್ನು ನೀಡಲಾಗುತ್ತಿದೆ.
- ಈ ಆಸ್ಪತ್ರೆಗಳ ಕಾರ್ಯನಿರ್ವಾಹಣಾ ಅಂಶಗಳಾದ ಮಾಸಿಕ ಹೆರಿಗೆಗಳು, ಗುಣಮಟ್ಟ ಗರ್ಭಿಣಿ ಬಾಣಂತಿಯರ ಆರೈಕೆ ಮುಂತಾದವುಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ
- ಈ ಆಸ್ಪತ್ರೆಗಳ referral (ಶಿಫಾರಸ್ಸು) ಪ್ರತಿ ತಿಂಗಳು ಮೇಲ್ವಿಚಾರಣೆ ಮಾಡಲಾಗುತ್ತಿದೆ.
- ಪ್ರತಿ ಒಂದು ತಾಯಿ ಮರಣವನ್ನು ಕಟ್ಟುನಿಟ್ಟಾಗಿ Audit ಗಳನ್ನು ಆಯಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಸಲಾಗುತ್ತಿದ್ದು ಇನ್ನು ಮುಂದೆಯೂ ಹೆಚ್ಚಿನ ಪರಿಣಾಮಕಾರಿಯಾಗಿ ಮಾಡಲಾಗುವುದು.

**ತಾಯಿ ಆರೋಗ್ಯ ಕಾರ್ಯಕ್ರಮದ ಯೋಜನೆಗಳು:**

**1. ಜನನಿ ಸುರಕ್ಷಾ ಯೋಜನೆ(JSY):**

ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆ ಮಾಡಿಸಿಕೊಂಡಿದ್ದಲ್ಲಿ **BPL** ವರ್ಗಕ್ಕೆ ಸೇರಿದ ಗರ್ಭಿಣಿಯರಿಗೆ ಹೆರಿಗೆಯಾದ ಕೂಡಲೇ **ರೂ.600/700** ಗಳನ್ನು ನೇರ ನಗದು ವರ್ಗಾವಣೆ ಮೂಲಕ ರಾಷ್ಟ್ರೀಯ ಆರೋಗ್ಯ ಅಭಿಯಾನದ ವತಿಯಿಂದ ನೀಡಲಾಗುತ್ತಿದೆ. ಈ ಯೋಜನೆಯಿಂದ ಸಾಂಸ್ಥಿಕ ಹೆರಿಗೆ ಗಳಿಗೆ ಉತ್ತೇಜನ ನೀಡಿ ತಾಯಿ ಮರಣವನ್ನು ಕಡಿಮೆ ಮಾಡಲು ಪರಿಣಾಮಕಾರಿಯಾಗಿರುತ್ತದೆ.

**2. ಜನನಿ ಶಿಶು ಸುರಕ್ಷಾ ಕಾರ್ಯಕ್ರಮ(JSSK):**

ಜನನಿ ಶಿಶು ಸುರಕ್ಷಾ ಕಾರ್ಯಕ್ರಮ(JSSK) ಕಾರ್ಯಕ್ರಮ ಈ ಯೋಜನೆಯಡಿಲ್ಲಿ ಕೆಳಕಂಡ 5 ಉಪಯುಕ್ತ components ಗಳು **ಎಲ್ಲಾವರ್ಗದ** ಗರ್ಭಿಣಿ ಮತ್ತು ಬಾಣಂತಿಯರಿಗೆ ಉಚಿತವಾಗಿರುತ್ತವೆ.

1. ಉಚಿತ ಊಟ
2. ಉಚಿತ ರಕ್ತ
3. ಉಚಿತ ಔಷಧಿ ಮತ್ತು consumables.
4. ಉಚಿತ ಸಾರಿಗೆ (ಮನೆಯಿಂದ ಆಸ್ಪತ್ರೆಗೆ ಮತ್ತು ಆಸ್ಪತ್ರೆಯಿಂದ ಮನೆಗೆ)
5. ಉಚಿತ ಪ್ರಯೋಗಾಲಯ ಪರೀಕ್ಷೆಗಳು

**3. ಲಕ್ಷ್ಯ ಕಾರ್ಯಕ್ರಮದ ಅನುಷ್ಠಾನ:**

ರಾಜ್ಯದ ಸಾರ್ವಜನಿಕ ಹೆರಿಗೆ ಆಸ್ಪತ್ರೆಯಲ್ಲಿ ಗುಣಮಟ್ಟದ ಹೆರಿಗೆ ಸೇವೆಗಳನ್ನು ಮತ್ತು ನವಜಾತ ಶಿಶು ಸೇವೆಗಳನ್ನು ನೀಡಿ ತಾಯಿ ಮರಣ & ನವಜಾತ ಶಿಶು ಮರಣವನ್ನು ಕಡಿಮೆಮಾಡುವ ಉದ್ದೇಶದಿಂದ ರಾಜ್ಯದ 125 ಹೆರಿಗೆ ಆಸ್ಪತ್ರೆಗಳಲ್ಲಿ ಲಕ್ಷ್ಯ ಕಾರ್ಯಕ್ರಮವು ಅನುಷ್ಠಾನಗೊಂಡು ತಾಯಿ ಮರಣವನ್ನು ಕಡಿಮೆ ಮಾಡಲಾಗುತ್ತಿದೆ. ಇದುವರೆಗೂ 123 ಹೆರಿಗೆ ಆಸ್ಪತ್ರೆಗಳು ಲಕ್ಷ್ಯ ಕಾರ್ಯ ಕ್ರಮದಡಿಯಲ್ಲಿ ಪ್ರಾಮಾಣಿಕರಣ (certification) ಸಾಧಿಸಿರುತ್ತವೆ.

**4. ಪ್ರಸೂತಿ ತೀವ್ರ ನಿಗಾ ಘಟಕಗಳು:**

ರಾಜ್ಯದ 18 ಜಿಲ್ಲಾ ಆಸ್ಪತ್ರೆಗಳ ಲ್ಲಿ ಪ್ರಸೂತಿ ತೀವ್ರ ನಿಗಾ ಘಟಕಗಳನ್ನುಸ್ಥಾಪಿಸಲಾಗಿದ್ದು ಇದರಿಂದ ಗರ್ಭಾವಸ್ಥೆ ಮತ್ತು ಪ್ರಸೂತಿಯಿಂದ ಉಂಟಾಗುವ ಮಾರಣಾಂತಿಕ ತೊಡುಕುಗಳನ್ನು ನಿವಾರಿಸಲು ಹಾಗೂ ರೋಗಿಯನ್ನು ಉಳಿಸಲು ಪರಿಣಾಮಕಾರಿಯಾಗಿರುತ್ತದೆ.

**5. ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ನಿರ್ಮಾಣ:**

ಇದುವರೆಗೂ 82 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳು ಅನುಮೋದನೆಗೊಂಡಿದ್ದು, ಇವುಗಳಲ್ಲಿ 62 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಕಾರ್ಯಗತಗೊಳಿಸಲಾಗಿದೆ. ಇದರಿಂದ ಗರ್ಭಿಣಿ ಮತ್ತು ಬಾಣಂತಿಯರಿಗೆ ಆರೈಕೆಯ ಪ್ರಾಶಸ್ತ್ಯವನ್ನು ನೀಡಲಾಗುತ್ತಿದೆ.

**6. Firsr Referral Units ಗಳ ಬಲಪಡಿಸುವಿಕೆ:**

First Referral Unitsಗಳಾದ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ & ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಮಾನವ ಸಂಪನ್ಮೂಲ, ಉಪಕರಣ ಮತ್ತು ತರಬೇತಿಯನ್ನು ನೀಡಲಾಗುತ್ತಿದ್ದು 24/7 ಸಮಗ್ರ ಮಾತೃ ಆರೈಕೆಯನ್ನು ನೀಡಲು ಒತ್ತು ಕೊಡಲಾಗುತ್ತಿದೆ. ಪ್ರಸ್ತುತ ರಾಜ್ಯದ 237 Firsr Referral Unitsಗಳು ಕಾರ್ಯನಿರ್ವಹಿಸುತ್ತಿವೆ.

**7. Midwifery initiative :**

ಗೌರವಯುತ ಮಾತೃ ಆರೈಕೆಯನ್ನು ನೀಡಲು, ಹೆಚ್ಚು ಸಹಜ ಹೆರಿಗೆಗಳನ್ನು ಉತ್ತೇಜಿಸಲು ಹಾಗೂ ಸಿಸೇರಿಯನ್ ಪ್ರಮಾಣವನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ಈ ಯೋಜನೆಯನ್ನು ಇದೀಗ ಅನುಷ್ಠಾನಗೊಳಿಸಿದೆ.

**8. ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ:**

ಪ್ರತಿ ತಿಂಗಳು 9 ನೇ ತಾರೀಖಿನಂದು ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (PMSMA) ಕಾರ್ಯಕ್ರಮವನ್ನು ರಾಜ್ಯದ 2122 ಆರೋಗ್ಯ ಸಂಸ್ಥೆಯಲ್ಲಿ ನಡೆಸಲಾಗುತ್ತಿದೆ ಈ ದಿನದಂದು ವಿಶೇಷವಾಗಿ ಗರ್ಭಿಣಿಯರಿಗೆ ಗುಣಮಟ್ಟದ ಪ್ರಸವಪೂರ್ವ ತಪಾಸಣೆಯನ್ನು ವೈದ್ಯಾಧಿಕಾರಿಗಳಿಂದ/ತಜ್ಞರಿಂದ ನಡೆಸಲಾಗುತ್ತಿದೆ. ಈ ದಿನದಂದು ಆರೈಕೆಯ ಜೊತೆ ಪೌಷ್ಠಿಕಾಂಶದ ಆಪ್ತ ಸಮಲೋಚನೆ, Birth planning ಇತ್ಯಾದಿ ಸೇವೆಗಳನ್ನು ನೀಡಲಾಗುತ್ತಿದೆ. ಈ ದಿನದಂದು ಖಾಸಗಿ ವಲಯದ ತಜ್ಞರು ಇಲಾಖೆಜೊತೆ ಕೈಜೋಡಿಸಿ ಸ್ವಯಂ ಪ್ರೇರಿತ ಸೇವೆಗಳನ್ನು ನೀಡುತ್ತಿದ್ದಾರೆ.

**9. ವಿಸ್ತೃತ ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (e-PMSMA):**

ಗುಣಾತ್ಮಕ ಪ್ರಸವಪೂರ್ವ ಆರೈಕೆಯನ್ನು ನೀಡಲು (ಅಂದರೆ ಹಿಮೋಗ್ಲೋಬಿನ್ % ಅನ್ನು ಪತ್ತೆ ಹಚ್ಚುವಿಕೆ, ರಕ್ತದ ಒತ್ತಡ ಪತ್ತೆ ಹಚ್ಚುವಿಕೆ ಮುಂತಾದ ಅಂಶಗಳನ್ನು ಎಲ್ಲಾ ಗರ್ಭಿಣಿಯರಿಗೆ 9 ನೇ ತಾರೀಖಿನಂದು ನೆರವೇರಿಸಲಾಗುತ್ತಿದೆ. ಮುಂದುವರೆದು, ತೊಡಕಿನ ಗರ್ಭದಾರಣೆಗಳನ್ನು (ಅಂದರೆ ಅಧಿಕ ರಕ್ತದೊತ್ತಡ ತೀವ್ರತರಹದ ರಕ್ತಹೀನತೆ, ಗರ್ಭಾವಸ್ಥೆಯಲ್ಲಿನ ಸಕ್ಕರೆ ಅಂಶ ಮುಂತಾದ ಕ್ಲಿಷ್ಟಕರ ಗರ್ಭಿಣಿ (High Risk Pregnancey) ಯರನ್ನು ಪ್ರತಿ ತಿಂಗಳು 24ನೇ ತಾರೀಖಿನಂದು ಹೆಚ್ಚುವರಿ ತಪಾಸಣೆಯನ್ನು ಮಾಡಲಾಗುತ್ತಿದೆ) ಇದರಿಂದ ತೊಡಕುಗಳನ್ನು ನಿವಾರಿಸಲು ಸಹಾಯವಾಗುತ್ತಿದ್ದು, ಗುಣಾತ್ಮಕ ಪ್ರಸವಪೂರ್ವ ಆರೈಕೆಯನ್ನು ನೀಡುವುದರಿಂದ ತಾಯಿ ಮರಣಗಳನ್ನು ಕಡಿಮೆ ಮಾಡಲಾಗುತ್ತಿದೆ.

ಎಲ್ಲಾ ವರ್ಗದ ತೊಡಕಿನ ಗರ್ಭಿಣಿಯರಿಗೆ ಕನಿಷ್ಠ 4 ಹೆಚ್ಚುವರಿ ತಪಾಸಣೆಗಳನ್ನು ಉತ್ತೇಜಿಸಲು 9 ತಿಂಗಳ ಗರ್ಭಾವಸ್ಥೆ ಅವಧಿಗೆ ಒಟ್ಟು ರೂ.300 ಗಳನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುತ್ತಿದೆ.

## ಶಿಶು ಮರಣದ ಕುರಿತು

ಎಲ್ಲ ರಾಜ್ಯಗಳಿಗೆ 2017-ರಾಷ್ಟ್ರೀಯ ಆರೋಗ್ಯ ನೀತಿ 2025 ರ ವೇಳೆಗೆ ನವಜಾತ ಶಿಶುಮರಣ ದರವನ್ನು 16 ಕ್ಕಿಂತ (ಪ್ರತಿ 1000 ಜೀವಂತ ಜನನಗಳಿಗೆ) ಕಡಿಮೆ ಸಾಧಿಸಲು ಗುರಿ ನಿಗಧಿಪಡಿಸಿದೆ.ರಾಜ್ಯದಲ್ಲಿ ಶಿಶುಮರಣಗಳ ಪ್ರಮಾಣವು ಕಡಿಮೆಯಾಗುತ್ತಿದ್ದು, ಮಾದರಿ ನೋಂದಣಿ ವ್ಯವಸ್ಥೆ 2020 (Sample Registration System-SRS) ರ ವರದಿಯನ್ವಯ ಕರ್ನಾಟಕ ರಾಜ್ಯದ ಸರಾಸರಿ ನವಜಾತ ಶಿಶುಮರಣ ದರವು 14 (ಪ್ರತಿ 1000 ಜೀವಂತ ಜನನಗಳಿಗೆ) ಇದ್ದು, ಭಾರತ ದೇಶದ ದರವು 20 ಇರುತ್ತದೆ. ರಾಜ್ಯವು ರಾಷ್ಟ್ರೀಯ ಆರೋಗ್ಯ ನೀತಿ 2025 ನಿಗಧಿಪಡಿಸಿದ ಗುರಿಯನ್ನು 5 ವರ್ಷ ಮುಂಚಿತವಾಗಿಯೇ ಸಾಧಿಸಿದೆ.

1/12/2023 ರಿಂದ 30/11/2024 ರವರೆಗೆ ರಾಜ್ಯದಲ್ಲಿ ಒಟ್ಟು 5483ನವಜಾತ ಶಿಶುಮರಣಗಳು (ಒಟ್ಟು 783406 ಜೀವಂತ ಜನನಗಳಿಗೆ) ವರದಿಯಾಗಿರುತ್ತವೆ.ಕರ್ನಾಟಕ ರಾಜ್ಯವು ಶಿಶುಮರಣ ದರ ಮಾದರಿ ನೋಂದಣಿ ವ್ಯವಸ್ಥೆ-2020ರ ವರದಿಯಂತೆ ಇತರೆ ರಾಜ್ಯಗಳಿಗೆ ಹೋಲಿಸಿದ್ದಲ್ಲಿ 8ನೇಯ ಸ್ಥಾನದಲ್ಲಿರುತ್ತದೆ.ನವಜಾತ ಶಿಶುಗಳಲ್ಲಿ ಅವಧಿಪೂರ್ವ ಜನನ, ಶಿಶುವಿನ ಕಡಿಮೆ ತೂಕದಿಂದಾಗುವ ತೊಂದರೆಗಳು, ಜನನ ಸಮಯದಲ್ಲಿ

ಉಸಿರುಗಟ್ಟುವಿಕೆ, ನ್ಯುಮೋನಿಯ, ಸೆಪ್ಸಿಸ್,ಜನ್ಮ ಜಾತ ಹೃದಯ ಕಾಯಿಲೆಗಳು, ನವಜಾತ ಶಿಶುಗಳ ಕಾಮಾಲೆ ಮತ್ತು ಅತಿಸಾರಭೇದಿ ಪ್ರಮುಖವಾಗಿ ಕಂಡು ಬಂದಿರುವ ಮರಣದ ಕಾರಣಗಳಾಗಿರುತ್ತವೆ.

**ಇಲಾಖೆಯಿಂದ ಮಕ್ಕಳ ಆರೋಗ್ಯದ ಬಗ್ಗೆ ಕೈಗೊಂಡ ಉಪಕ್ರಮಗಳು:**ನವಜಾತ ಶಿಶುಗಳ ಮರಣಗಳನ್ನು ಕಡಿಮೆ ಮಾಡಲು ಮತ್ತು ಆರೋಗ್ಯ ವೃಧ್ಧಿಸಲು ರಾಜ್ಯದಲ್ಲಿ ವೈದ್ಯಕೀಯ ಸೇವೆಗಳಿಗಾಗಿ ಬಹುಹಂತದ ಸೌಲಭ್ಯ ಹಾಗೂ ವಿವಿಧ ಆರೋಗ್ಯ ಕಾರ್ಯಕ್ರಮಗಳು ಜಾರಿಯಲ್ಲಿದ್ದು ವಿವರಗಳನ್ನು ಕೆಳಕಂಡಂತಿವೆ.

## ಆರೋಗ್ಯ ಸೇವೆಗಳು:

A. ಸೌಲಭ್ಯ ಆಧಾರಿತ ಸೇವೆಗಳು
- ನವಜಾತ ಶಿಶು ಆರೈಕೆ ಕಾರ್ನರ್ (NBCC)
- ನವಜಾತ ಶಿಶು ಸ್ಥಿರೀಕರಣ ಘಟಕ (NBSU)
- ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU)
- ಕಾಂಗರೂ ಮದರ್ ಕೇರ್ ಮತ್ತು ಲ್ಯಾಕ್ಟೇಶನ್ ಕ್ಲಿನಿಕ್ (KMC & LC)
- ತಾಯಿಯ ಎದೆಹಾಲಿನ ಸಮಗ್ರ ನಿರ್ವಹಣಾ ಕೇಂದ್ರಗಳು (CLMC)

B. ಸಮುದಾಯ ಆಧಾರಿತ ಸೇವೆಗಳು
- ಗೃಹ ಆಧಾರಿತ ನವಜಾತ ಶಿಶು ಆರೈಕೆ (HBNC).
- ಗೃಹ ಆಧಾರಿತ ಚಿಕ್ಕ ಮಕ್ಕಳ ಆರೈಕೆ (HBYC).

C. ಸಮುದಾಯ ಜಾಗೃತಿ ಕಾರ್ಯಕ್ರಮಗಳು
- ತೀವ್ರವಾದ ಅತಿಸಾರ ನಿಯಂತ್ರಣ ಪಾಕ್ಷಿಕ (IDCF).
- ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS).
- ರಾಷ್ಟ್ರೀಯ ನವಜಾತ ಶಿಶು ಸಪ್ತಾಹ (NNW).
- ವಿಶ್ವ ಸ್ತನ್ಯಪಾನ ಸಪ್ತಾಹ (WBW).

D. ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ ತರಬೇತಿಗಳು
- ತಾಯಿಯ ಸಂಪೂರ್ಣ ವಾತ್ಸಲ್ಯ ಹಾಗೂ ಶಿಶು ಮತ್ತು ಚಿಕ್ಕ ಮಕ್ಕಳ ಪೋಷಣೆ (MAA-IYCF).
- ಸೌಲಭ್ಯ ಆಧಾರಿತ ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (F-IMNCI).
- ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (IMNCI).
- ಸೌಲಭ್ಯ ಆಧಾರಿತ ನವಜಾತ ಶಿಶು ಆರೈಕೆ (FBNC).
- ಚಿಕ್ಕ ಮಗುವಿಗೆ ಮನೆ ಆಧಾರಿತ ಆರೈಕೆ (HBYC)
- ನವಜಾತ ಸ್ಥಿರೀಕರಣ ಘಟಕ (NBSU)
- ನವಜಾತ ಶಿಶು ಸುರಕ್ಷಾ ಕಾರ್ಯಕ್ರಮ (NSSK)

E. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಆರ್ಥಿಕ ನೆರವು
- ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಉಚಿತ ಔಷಧಗಳು ಮತ್ತು ಪ್ರಯೋಗಾಲಯದ ಪರೀಕ್ಷೆಗಳು
- ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಉಚಿತ ಸಾರಿಗೆ ರೆಫರಲ್ ಸೇವೆ

F. ನವಜಾತ ಶಿಶು ಆಂಬುಲೆನ್ಸ್ ಸೇವೆಗಳು

## ಸೌಲಭ್ಯ ಆಧಾರಿತ ಸೇವೆಗಳು:

- **ನವಜಾತ ಶಿಶುವಿನ ಆರೈಕೆ ಕಾರ್ನರ್ (NBCC): 1ನೇ ಹಂತದ ಆರೈಕೆ**

ಹೆರಿಗೆಗಳನ್ನು ನಿರ್ವಹಿಸುತ್ತಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಮಟ್ಟದ ಆಸ್ಪತ್ರೆಗಳುಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳ ಆರೈಕೆಗಾಗಿ ನವಜಾತ ಶಿಶು ಆರೈಕೆ ಕೇಂದ್ರಗಳು (NBCC) ಕಾರ್ಯನಿರ್ವಹಿಸುತ್ತಿವೆ. ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ ವಾರ್ಮರ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಪ್ರಸವ ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ಉಪಕರಣ ಹಾಗೂ ಆಕ್ಸಿಜನ್

ಸೌಲಭ್ಯವನ್ನು ನೀಡಲಾಗಿರುತ್ತದೆ. ಈ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಿತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರುಗಳಿಗೆ ನವಜಾತ ಶಿಶು ಸುರಕ್ಷಾ ಕಾರ್ಯಕ್ರಮದಡಿ ತರಬೇತಿಯನ್ನು ನೀಡುವುದರ ಮೂಲಕ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದರ ಮೂಲಕ ಉತ್ತಮ ಸೇವೆಯನ್ನು ಒದಗಿಸಲಾಗುತಿದೆ. ಏಪ್ರಿಲ್ 2024 ರಿಂದ ನವ್ವೆಂಬರ- 2024 ರವರೆಗೆ 523757 ಜೀವಂತ ಜನನಗಳಿಗೆ ಅವಶ್ಯಕ ಸೇವೆ ನೀಡಲಾಗಿರುತ್ತದೆ (ವರದಿ : HMIS).

- **ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU): 2ನೇ ಹಂತದ ಆರೈಕೆ**

ರಾಜ್ಯದಲ್ಲಿ ಪ್ರಸ್ತುತ 165 ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU) ಕಾರ್ಯನಿರ್ವಹಿಸುತ್ತಿವೆ. ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು ಸಮುದಾಯ ಆರೋಗ್ಯ ಕೇಂದ್ರ/ಎಫ್.ಆರ್.ಯು ಹಾಗೂ ತಾಲ್ಲೂಕ ಮಟ್ಟದ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಘಟಕಗಳಲ್ಲಿ ಜನನ ಸಮಯದಲ್ಲಿ ತೊಂದರೆಗೊಳಾಗುವ ನವಜಾತ ಶಿಶುಗಳಿಗೆ ಅಗತ್ಯ ತುರ್ತು ಚಿಕಿತ್ಸೆ ನೀಡಲಾಗುವುದು. ಇದಲ್ಲದೇ ನವಜಾತ ಶಿಶುವಿನಲ್ಲಿ ಕಂಡುಬರುವ ಜಾಂಡೀಸ್ ಕಾಯಿಲೆಗೆ ಅಗತ್ಯವಿರುವ ಫೋಟೋಥೆರಪಿ ಚಿಕಿತ್ಸೆಯನ್ನು ನೀಡಲು ಉಪಕರಣಗಳನ್ನು ಒದಗಿಸಲಾಗಿದೆ ಹಾಗೂ ನವಜಾತ ಶಿಶುಗಳಲ್ಲಿ/ ಮಕ್ಕಳಲ್ಲಿ ಕಂಡುಬರುವ ಅತಿಸಾರ ಬೇದಿ ಇತ್ಯಾದಿ ತೊಂದರೆಗಳಿಗೂ ಸಹ ಚಿಕಿತ್ಸೆಯನ್ನು ನೀಡಲಾಗುವುದು. ನವಜಾತ ಶಿಶು ಸ್ಥಿರೀಕರಣ ಘಟಕಗಳಲ್ಲಿ ಇಬ್ಬರು ತರಬೇತಿ ಹೊಂದಿದ ಶುಶ್ರೂಷಕರುಗಳನ್ನು ನಿಯೋಜಿಸಿದ್ದು ನವಜಾತ ಶಿಶುಗಳ ಆರೋಗ್ಯವನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ಏಪ್ರಿಲ್ 2024 ರಿಂದ ನವ್ವೆಂಬರ- 2024 ರವರೆಗೆ ಒಟ್ಟು 16298 ನವಜಾತ ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ.87.6 ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿರುತ್ತಾರೆ.

- **ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU): 3ನೇ ಹಂತದ ಆರೈಕೆ**

ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮತ್ತು ಆಯ್ದ ಹೆಚ್ಚಿನ ಹೆರಿಗೆಗಳಾಗುವ ತಾಲ್ಲೂಕು ಆಸ್ಪತ್ರೆಗಳಲ್ಲಿ ಒಟ್ಟು 50 SNCUಗಳು ಸ್ಥಾಪಿಸಲಾಗಿದೆ. 24×7 ಸೇವೆಗಳನ್ನು ಒದಗಿಸಲು ತರಬೇತಿ ಪಡೆದ ಮಕ್ಕಳ ತಜ್ಞರು, ವೈದ್ಯರು, ಶುಶ್ರೂಷಕರು ಮತ್ತು ಸಹಾಯಕ ಸಿಬ್ಬಂದಿಯಿಂದ SNCUಗಳನ್ನು ನಿರ್ವಹಿಸಲಾಗುತ್ತಿದೆ. 50 SNCUಗಳಲ್ಲಿ ಒಟ್ಟು 1138 ಹಾಸಿಗೆಗಳಿದ್ದು, ಏಪ್ರಿಲ್ 2024 ರಿಂದ ನವ್ವೆಂಬರ- 2024 ರವರೆಗೆ 52386 ನವಜಾತ ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ. 86.9% ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿ ಬಿಡುಗಡೆ ಹೊಂದಿರುತ್ತಾರೆ. ನವಜಾತ ಶಿಶುವಿಗೆ ಬೆಂಬಲ ಆರೈಕೆಯನ್ನು ಬಲಪಡಿಸಲು 40 SNCUಗಳಲ್ಲಿ ಕಾಂಗರೂ ಮದರ್ ಕೇರ್ (KMC) ward ಗಳು ಮತ್ತು ಹಾಲುಣಿಸುವ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. ಕಡಿಮೆ ಜನನ ತೂಕದ ಶಿಶುಗಳ ಬದುಕುಳಿಯುವಿಕೆಯನ್ನು ಹೆಚ್ಚಿಸಲು ಆರಂಭಿಕ ಸ್ತನ್ಯಪಾನ ಮತ್ತು ಸಂಪೂರ್ಣ ಸ್ತನ್ಯಪಾನದ (exclusive breastfeeding) ಮಹತ್ವವನ್ನು ಪೋಷಕರಿಗೆ ತಿಳಿಸಿ ಕಾಂಗರೂ ಮಾದರಿ ಆರೈಕೆಯನ್ನು ನೀಡಲು ಉತ್ತೇಜಿಸುತ್ತಾರೆ.

- **ತಾಯಿಯ ಎದೆಹಾಲಿನ ಸಮಗ್ರ ನಿರ್ವಹಣಾ ಕೇಂದ್ರಗಳು (CLMC):**

ಸಮಗ್ರ ಹಾಲುಣಿಸುವಿಕೆ ನಿರ್ವಹಣಾ ಕೇಂದ್ರ (CLMC) ಆಸ್ಪತ್ರೆಯೊಳಗಿನ ಎಲ್ಲಾ ತಾಯಂದಿರಿಗೆ ಸಮಗ್ರ ಹಾಲುಣಿಸುವ ಬೆಂಬಲ ಮತ್ತು ನಿರ್ವಹಣೆಯನ್ನು ಒದಗಿಸುವ ಉದ್ದೇಶಕ್ಕಾಗಿ ರಾಜ್ಯದಲ್ಲಿ 8 ಆಸ್ಪತ್ರೆಗಳಲ್ಲಿ CLMC ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತವಾಗಿ, ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆ, ಘೋಷಾ ಆಸ್ಪತ್ರೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ; ಲೇಡಿ ಗೋಶೆನ್ ಆಸ್ಪತ್ರೆ, DK; ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಸನ; ಬೆಳಗಾವಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಬೆಳಗಾವಿ, ಶಿವಮೊಗ್ಗ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಶಿವಮೊಗ್ಗ; ಕಲಬುರ್ಗಿ ಜಿಲ್ಲಾ ಆಸ್ಪತ್ರೆ, ಕಲಬುರ್ಗಿ ಇಲ್ಲಿ ಸ್ಥಾಪಿಸಲಾಗಿದ್ದು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

**ಸಮುದಾಯ ಆಧಾರಿತ ಸೇವೆಗಳು:**

- **ಮನೆ ಆಧಾರಿತ ನವಜಾತ ಶಿಶು ಆರೈಕೆ (HBNC):** ಆಶಾ ಕಾರ್ಯಕರ್ತೆಯರು ಹೆರಿಗೆಯ ನಂತರದ ಮೊದಲ 42 ದಿನಗಳಲ್ಲಿ 6-7 ಬಾರಿ ನವಜಾತ ಶಿಶುವಿನ ಮನೆಗಳಿಗೆ ಭೇಟಿ ನೀಡುತ್ತಾರೆ. 40844 ಆಶಾ ಕಾರ್ಯಕರ್ತೆಯರಿಗೆ ಸಾಮಾನ್ಯ ನವಜಾತ ಶಿಶು ಕಾಯಿಲೆಗಳನ್ನು ಗುರುತಿಸಲು ಮತ್ತು ಸ್ತನ್ಯಪಾನ ಮತ್ತು ನವಜಾತ ಶಿಶುವಿನ ಆರೈಕೆಯ ಬಗ್ಗೆ ತಾಯಂದಿರಿಗೆ ಶಿಕ್ಷಣ ನೀಡಲು ತರಬೇತಿ ನೀಡಲಾಗಿದೆ. ನವಜಾತ ಶಿಶುವಿನ ಆರೈಕೆಯನ್ನು ಖಚಿತಪಡಿಸಿಕೊಳ್ಳಲು ಅವರಿಗೆ ಅಗತ್ಯ ಉಪಕರಣಗಳು ಮತ್ತು ಔಷಧಿಗಳನ್ನು ಒಳಗೊಂಡಿರುವ ಕಿಟ್ ಅನ್ನು ಒದಗಿಸಲಾಗಿದೆ.

- **ಚಿಕ್ಕ ಮಕ್ಕಳಿಗಾಗಿ ಮನೆ ಆಧಾರಿತ ಆರೈಕೆ (HBYC):**HBYC ಕಾರ್ಯಕ್ರಮದಡಿ ಆಶಾ ಕಾರ್ಯಕರ್ತೆಯರು (3, 6, 9, 12 ಮತ್ತು 15 ನೇ ತಿಂಗಳುಗಳು) ಐದು ಮನೆ ಭೇಟಿಗಳನ್ನು ನೀಡಿ, ಮಕ್ಕಳ ಆರೋಗ್ಯದಲ್ಲಿ ನ್ಯೂನತೆ ಕಾಣಿಸಿದಲ್ಲಿ ಆ ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸುವ ಕಾರ್ಯಕ್ರಮ ಅನುಷ್ಠಾನವಾಗಿದೆ. ರಾಜ್ಯಾದ್ಯಂತ 32476 ಆಶಾ ಕಾರ್ಯಕರ್ತೆಯರು HBYC ಅಡಿಯಲ್ಲಿ ತರಬೇತಿ ಪಡೆದಿದ್ದು, ಎಲ್ಲಾ ಜಿಲ್ಲೆಗಳು ಏಪ್ರಿಲ್ 2023 ರಿಂದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ.

## ಸಮುದಾಯ ಜಾಗೃತಿ ಕಾರ್ಯಕ್ರಮಗಳು:

- **ತೀವ್ರವಾದ ಅತಿಸಾರ ನಿಯಂತ್ರಣ ಪಾಕ್ಷಿಕ (IDCF):**ಅತಿಸಾರ ನಿರ್ವಹಣೆಯ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸಲು IDCF ಪಾಕ್ಷಿಕವನ್ನು ಆಚರಿಸಲಾಗುತ್ತಿದೆ. ಸದರಿ ಪಾಕ್ಷಿಕಾಚರಣೆ ಸಂದರ್ಭದಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತರು ಮತ್ತು ಪ್ರಾಥಮಿಕ ಆರೋಗ್ಯ ಶುಶ್ರೂಷಕರು ಗಳಂತಹ ಎಲ್ಲಾ ಮೊಂಚೂಣಿ ಕಾರ್ಯಕರ್ತರು ORS ಪೊಟ್ಟಣಗಳು ಮತ್ತು Zinc Sulphate ಮಾತ್ರೆಗಳ ಸಕ್ರಿಯ ಬಳಸುವಿಕೆ ಮತ್ತು ವಿತರಣೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಆರೋಗ್ಯ ಕಾರ್ಯಕರ್ತರು 5 ವರ್ಷದೊಳಗಿನ ಮಕ್ಕಳ ಮನೆಗಳಿಗೆ ಭೇಟಿ ನೀಡುತ್ತಾರೆ ಮತ್ತು ORS ದ್ರಾವಣ ತಯಾರಿಕೆ, ಮನೆಯಲ್ಲಿ ಅತಿಸಾರ ನಿರ್ವಹಣೆ, ನೈರ್ಮಲ್ಯತೆ, ಕೈ ತೊಳೆಯುವ ತಂತ್ರಗಳ ಬಗ್ಗೆ ಪೋಷಕರಿಗೆ ಜಾಗೃತಿ ಮೂಡಿಸುತ್ತಾರೆ.
- **ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS):**ಕಡಿಮೆ ಜನನದ ತೂಕ, ಅಪೌಷ್ಟಿಕತೆ, ಒಳಾಂಗಣ ವಾಯುಮಾಲಿನ್ಯ, ರೋಗ ನಿರೋಧಕ ಶಕ್ತಿಯ ಕೊರತೆ, ನೈರ್ಮಲ್ಯದ ಕೊರತೆ ಮತ್ತು ಇತರ ಅನೇಕ ಸಾಮಾಜಿಕ-ಆರ್ಥಿಕ ಅಂಶಗಳಂತಹ ಅಪಾಯಕಾರಿ ಅಂಶಗಳ ಸಂಯೋಜನೆಯಿಂದ ಉಂಟಾಗುವ ಬಾಲ್ಯದ ನ್ಯುಮೋನಿಯಾ ಗುರುತಿಸುವಿಕೆ, ನಿರ್ವಹಣೆ ಮತ್ತು ಸೂಕ್ತ ರೆಫರಲ್ ಸೇವೆಗಳ ಬಗ್ಗೆ ಜಾಗೃತಿ ಮೂಡಿಸಲು ನವೆಂಬರ್ 12 ರಿಂದ ಫೆಬ್ರುವರಿ 28 ರವರೆಗೆ SAANS ಅಭಿಯಾನವನ್ನು ನಡೆಸಲಾಗಿರುತ್ತದೆ. ಆಶಾ ಕಾರ್ಯಕರ್ತರು ಮತ್ತು ಕ್ಷೇತ್ರ ಮಟ್ಟದ ಆರೋಗ್ಯ ಕಾರ್ಯಕರ್ತರು ಮನೆಗಳಿಗೆ ಭೇಟಿ ನೀಡಿ ಜಾಗೃತಿ ಚಟುವಟಿಕೆಗಳನ್ನು ನಡೆಸಿರುತ್ತಾರೆ.
- **ರಾಷ್ಟ್ರೀಯ ನವಜಾತ ಶಿಶು ಸಪ್ತಾಹ:** ಕರ್ನಾಟಕದಲ್ಲಿ 2016 ರಿಂದ ನವಜಾತ ಶಿಶು ಸಪ್ತಾಹವನ್ನು ಆಚರಿಸಲಾಗುತ್ತಿದೆ. ಇದು ನವಜಾತ ಶಿಶುಗಳ ಆರೈಕೆಗೆ ಪ್ರಾಮುಖ್ಯತೆಯನ್ನು ನೀಡಲು ಮತ್ತು ನವಜಾತ ಶಿಶುಗಳ ಆರೈಕೆ ಮತ್ತು ಸ್ತನ್ಯಪಾನವನ್ನು ಸುಧಾರಿಸುವ ಮಹತ್ವವನ್ನು ಒತ್ತಿಹೇಳುವ ಕಾರ್ಯಕ್ರಮವಾಗಿದೆ. ಇದನ್ನು ಪ್ರತಿ ವರ್ಷ ನವೆಂಬರ್ ಎರಡನೇ ವಾರದಲ್ಲಿ ಆಚರಿಸಲಾಗುತ್ತದೆ. ನವೆಂಬರ್ 2024 ರಲ್ಲಿ ಸೇವೆಯ ಗುಣಮಟ್ಟ ಸುಧಾರಿಸುವ ಸಂಬಂಧ ಎಲ್ಲಾ 50 SNCU ಗಳ MusQan ಮೌಲ್ಯಮಾಪನವನ್ನು ನಡೆಸಿ ಸೇವಾ ಗುಣಮಟ್ಟಾಟ ಸುಧಾರಿಸಲಾಗಿದೆ.
- **ವಿಶ್ವ ಸ್ತನ್ಯಪಾನ ಸಪ್ತಾಹ:**2024 ಆಗಸ್ಟ್ ಮೊದಲ ವಾರದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಸ್ತನ್ಯಪಾನದ ಪ್ರಾಮುಖ್ಯತೆ ಮತ್ತು ಸ್ತನ್ಯಪಾನದಲ್ಲಿ ಪೋಷಕರ ಪಾತ್ರವನ್ನು ಒತ್ತಿಹೇಳಲು ವಿಶ್ವ ಸ್ತನ್ಯಪಾನ ಸಪ್ತಾಹವನ್ನು ರಾಜ್ಯದಾದ್ಯಂತ ಆಚರಿಸಲಾಗಿದೆ.

## ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ:

- FBNC ತರಬೇತಿ ನಡೆಸಲು ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಲಾಗಿದೆ. 2023-24ರಲ್ಲಿ 12 ತರಬೇತಿ ತಂಡಗಳ ಮೂಲಕ ಒಟ್ಟು 289 ಶುಶ್ರೂಷಕರಿಗೆ ತರಬೇತಿ ನೀಡಲಾಗಿದೆ ಹಾಗೂ 2023-24ರಲ್ಲಿ ಒಟ್ಟು 245 ಶುಶ್ರೂಷಕರಿಗೆ ನವಜಾತ ಶಿಶುಗಳ ವೈದ್ಯಕೀಯ ಆರೈಕೆಗಾಗಿ ತರಬೇತಿ ನೀಡಲಾಗಿದೆ.
- IMNCI, F-IMNCI, NSSK, MAA-IYCF ತರಬೇತಿಗಳನ್ನು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ತರಬೇತಿ ನೀಡಲಾಗಿದೆ.
- NBSU ತರಬೇತಿಗಳು ಮತ್ತು software ಏಕೀಕರಣ ತರಬೇತಿಗಳನ್ನು ನೀಡಿ ರಾಜ್ಯ ಮಕ್ಕಳ ಆರೋಗ್ಯ ವಿಭಾಗವು ನಡೆಸಲಾಗಿರುತ್ತದೆ.

## ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಆರ್ಥಿಕ ನೆರವು ಯೋಜನೆಗಳು:

ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK):ಅನಾರೋಗ್ಯದಿಂದ ಬಳಲುತ್ತಿರುವ ಶಿಶುಗಳ ಚಿಕಿತ್ಸೆಗಾಗಿ ಪೋಷಕರಿಂದ ಖರ್ಚು ಮಾಡುವುದನ್ನು ಕಡಿಮ ಮಾಡಲು JSSK ಕಾರ್ಯಕ್ರಮದಡಿ ಆರೋಗ್ಯ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನ ನೀಡುವ ಕಾರ್ಯಕ್ರಮವು ಅನುಷ್ಠಾನದಲ್ಲಿದೆ.

**ನವಜಾತ ಶಿಶುಗಳ ಆಂಬ್ಯುಲೆನ್ಸ್ ಸೇವೆಗಳು:**

ಅವಶ್ಯಕತೆಗೆ ಅನುಗುಣವಾಗಿ ಹೆಚ್ಚಿನ ಚಿಕಿತ್ಸೆಗಾಗಿ ನವಜಾತ ಶಿಶುಗಳನ್ನು ಮೇಲ್ದರ್ಜೆ ಸೌಲಭ್ಯವುಳ್ಳ ಆಸ್ಪತ್ರೆಗೆ ಕರೆದೊಯ್ಯಲು ಮೈಸೂರು, ಬೆಂಗಳೂರು, ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನವಜಾತ ಶಿಶುಗಳ ಆಂಬುಲೆನ್ಸ ಸೇವೆಗಳನ್ನು ಪ್ರಾರಂಭ ಮಾಡಲಾಗಿದೆ. ನವಜಾತ ಶಿಶುಗಳಿಗೆ ಪ್ರಯಾಣದ ಸಂದರ್ಭದಲ್ಲಿ ಚಿಕಿತ್ಸೆ ನೀಡಲು ವಿಶೇಷವಾಗಿ ಟ್ರಾನ್ಸ್‌ಪೋರ್ಟ್ ಇನ್ಕ್ಯುಬೇಟರ್, ಟ್ರಾನ್ಸ್‌ಪೋರ್ಟ್ ವೆಂಟಿಲೇಟರ್, ಆಮ್ಲಜನಕ ಸಿಲೆಂಡರ್, ಸಿರಿಂಜ್ ಪಂಪ್, ಮಲ್ಟಿ-ಚಾನಲ್ ಮಾನಿಟರ್, ಪಲ್ಸ್ ಆಕ್ಸಿಮೀಟರ್, ಸೇರಿದಂತೆ ವಿಶೇಷ ಉಪಕರಣಗಳನ್ನು ಅಳವಡಿಸಲಾಗಿದೆ.

ಬಾಣಂತಿಯರಿಗೆ ಮುಂದಿನ ಅನಗತ್ಯ ಗರ್ಭಧಾರಣೆಯನ್ನು ತಡೆಯಲು ಹಾಗೂ ಮಕ್ಕಳ ನಡುವೆ ಅಂತರ ಕಾಪಾಡಲು ತಾತ್ಕಾಲಿಕ ವಿಧಾನವಾದ ನಿರೋದ್, ಛಾಯಾ ಮತ್ತು ಕುಟುಂಬ ಸಂಪೂರ್ಣವಾಗಿದೆ ಇಂತಿಷ್ಟೆ ಮಕ್ಕಳು ಸಾಕು ಎಂದು ನಿರ್ಧರಿಸಿದಲ್ಲಿ ಶಾಶ್ವತ ವಿಧಾನವಾದ ಮಹಿಳಾ ಸಂತಾನ ನಿರೋಧ ಶಸ್ತ್ರಚಿಕಿತ್ಸೆ (LSCS with TO Postpartal, TO) ಸೇವೆಗಳನ್ನು ಒದಗಿಸಲಾಗುತ್ತಿರುತ್ತದೆ.

ಶಸ್ತ್ರಚಿಕಿತ್ಸಾ ಮೂಲಕ ಹೆರಿಗೆ ಮಾಡುವುದರೊಂದಿಗೆ ಸಂತಾನ ನಿರೋಧ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿರುವಾಗ ಶಸ್ತ್ರಚಿಕಿತ್ಸಾ ತೊಂದರೆಗಳಿಂದ ಒಂದು ಬಾಣಂತಿಯ ಮರಣ ಕಳೆದ ಒಂದು ವರ್ಷದಲ್ಲಿ ರಾಜ್ಯದ ಕೊಪ್ಪಳ ಜಿಲ್ಲೆಯಲ್ಲಿ ವರದಿಯಾಗಿರುತ್ತದೆ. ಇತರೇ ಯಾವುದೇ ಬಾಣಂತಿಯರ ಮರಣ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ವರದಿಯಾಗಿರುವುದಿಲ್ಲ.

**ಆಕುಕ** 91 **ಎಸ್ ಟಿ ಕ್ಯೂ** 2024

(ದಿನೇಶ್ ಗುಂಡೂರಾವ್)
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**